ಬಹು ಆವಶ್ಯಕ. ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೊಂದಿದೆ, ಅದೇ ನಮ್ಮ ಮರೆಗುಳಿತನ. ಅದು ನಮ್ಮ ತೀರ್ಮಾನವನ್ನು, ಶಪಥವನ್ನು ಮರೆಸಿ, ನಮಗೆ ನಮ್ಮ ಗುರಿ ತಲುಪುವುದಕ್ಕೆ ತೊಡಕನ್ನುಂಟುಮಾಡುತ್ತದೆ. ಮರೆಯುವುದು ನಮ್ಮ ಸಹಜ ಸ್ವಭಾವವಲ್ಲ. ಅದು ನಾವು ರೂಢಿಸಿಕೊಂಡ ಜಾಡ್ಯ. ಗುರಿಯ ಬಗ್ಗೆ ನಿರ್ಲಕ್ಷ್ಯವಿದ್ದಾಗ, ಮನಸ್ಸು ತಮಸ್ಸಿನಿಂದ ಕೂಡಿದ್ದಾಗ ಮರೆವು ಪ್ರಾರಂಭವಾಗುತ್ತದೆ. ಆಹಾರದಲ್ಲಿ ಪೌಷ್ಟಿಕಾಂಶಗಳು ಇಲ್ಲದಿದ್ದರೂ ಮನಸ್ಸು ಲವಲವಿಕೆಯಿಂದಿರುವುದಿಲ್ಲ. ನಡೆಯುವವನು ಎಡವುತ್ತಾನೆ, ಜಾರುವವನು ಉರುಳುತ್ತಾನೆ ಎಂಬುದೊಂದು ನಾಣ್ಣುಡಿ. ಅಂದರೆ ನಮ್ಮ ಹಾದಿಯಲ್ಲಿ ನಾವು ಕೆಲವು ಬಾರಿ ಸೋಲಬಹುದು. ಸೋಲು ಗೆಲುವಿಗೆ ಮೆಟ್ಟಿಲು ಎಂದು ತಿಳಿದು ಎದೆಗುಂದದೆ ಮತ್ತೆ ಪ್ರಯತ್ನಿಸಬೇಕು. ಆದರೆ ನಾವು ಅದಕ್ಕಾಗಿ ಚಿಂತಿಸದೆ, ನಾವೇ ಆ ಕಾರಣಕ್ಕಾಗಿ ಒಂದು ಶಿಕ್ಷೆಯನ್ನು (ಸ್ವಲ್ಪ ಕಠಿಣವಾದರೂ ಚಿಂತೆಯಿಲ್ಲ) ಅನುಭವಿಸಬೇಕು. ಇದರಿಂದ ನಮ್ಮ ತೀರ್ಮಾನಕ್ಕಾಗಲಿ ಅಥವಾ ಶಪಥಕ್ಕಾಗಲಿ ಒಂದು ಶಕ್ತಿ ಬರುವುದು.

ಸ್ವಲ್ಪ ಕಾಲ ಕಳೆದಂತೆ ನಾವು ನಮ್ಮಲ್ಲಿಯೇ ಗಮನಿಸಬಹುದಾದಂತಹ ಹಲವು ಬದಲಾವಣೆಗಳು ಕಂಡುಬರುತ್ತವೆ. ಮೊದಲನೆಯದಾಗಿ ನಾವು ಇತರರ ತಪ್ಪನ್ನು ಅಥವಾ ದೋಷವನ್ನು ನೋಡುವುದಿಲ್ಲ. ಇದರಿಂದ ನಮಗೆ ಶಾಂತಿ ಸಿಗುತ್ತಿದೆ ಎಂದು ಗುರುತಿಸುತ್ತೇವೆ. ಎರಡನೆಯದಾಗಿ ನಮ್ಮ ದೋಷಗಳನ್ನು ನೋಡಿಕೊಳ್ಳುವುದರ ಮೂಲಕ ನಾವು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲಾರಂಭಿಸಿದ್ದೇವೆ ಮತ್ತು ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಿದ್ದೇವೆ. ಮೂರನೆಯದಾಗಿ ನಾವು ಪರರ ದೋಷವನ್ನು ನೋಡುವುದಿಲ್ಲವಾದ್ದರಿಂದ ನಮಗೆ ಉತ್ತಮ ಸ್ನೇಹಪೂರಿತ ಪರಿಸರ ದೊರಕಿದೆ. ಸುತ್ತಮುತ್ತಲಿನ ಜನ ನಮ್ಮವರಾಗಿದ್ದಾರೆ. ನಾಲ್ಕನೆಯದಾಗಿ ಶ್ರೀಮಾತೆಯವರ ನುಡಿಯೊಂದನ್ನು ಪಾಲಿಸಿದ ಅಸಾಮಾನ್ಯ ತೃಪ್ತಿ ನಮಗೆ ದೊರಕಿರುತ್ತದೆ. ಇದರಿಂದ ಸಾಮಾನ್ಯ ಮಾನವರಾದ ನಾವು ದೇವನಾಗುವ ಕಡೆಗೆ ಮುಂದುವರಿಯುತ್ತಿರುವುದು ಕಂಡುಬರುತ್ತದೆ. ✡

## ಕೇಳಿ ತಿಳಿಯಿರಿ

**[ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದರು. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು.]**

✹ **ಹೆಣ್ಣು ಮಕ್ಕಳು ಪ್ರಕೃತಿಸಹಜ ಋತುಚಕ್ರದಿಂದಾಗಿ ಅಪವಿತ್ರತೆ ಹೊಂದಿರುತ್ತಾರೆ. ಆದುದರಿಂದ ಅವರಿಗೆ ಗಾಯತ್ರಿ ಪ್ರೇರಣೆಯಾಗುವುದಿಲ್ಲ ಎಂದು ಹೇಳುತ್ತಾರಲ್ಲ ಇದು ನಿಜವೆ? ಹಾಗಾದರೆ ಹೆಣ್ಣುಮಕ್ಕಳು ಗಾಯತ್ರಿ ಜಪ ಮಾಡುವುದಕ್ಕೆ ಅನರ್ಹರೆ? ಅವರಿಗೆ ಜಪದ ಫಲ ಲಭಿಸದೆ?**

ಗಾಯತ್ರೀ ಮಂತ್ರದ ಉದ್ದೇಶವೇ ಮನಸ್ಸನ್ನು ಪರಿಶುದ್ಧಗೊಳಿಸಿ ಆಧ್ಯಾತ್ಮಿಕ ಜಾಗೃತಿಯನ್ನು ಉಂಟುಮಾಡುವುದು. ಈ ರೀತಿ ಆಧ್ಯಾತ್ಮಿಕ ಜಾಗೃತಿಯನ್ನು ಪಡೆಯಲು ಎಲ್ಲರೂ ಅರ್ಹರು. ಋತುಚಕ್ರ ಒಂದು ದೈಹಿಕ ಕ್ರಿಯೆ—ಇತರ ದೈಹಿಕ ಕ್ರಿಯೆಗಳಂತೆಯೇ. ವ್ಯಕ್ತಿ ಅಪವಿತ್ರನಾಗುವುದು ದೈಹಿಕ ಕ್ರಿಯೆಗಳಿಂದಲ್ಲ, ಮನಸ್ಸಿನ ಭಾವಗಳಿಂದ. ಆದ್ದರಿಂದಲೇ 'ಯದ್ಭಾವಂ ತದ್ಭವತಿ' ಎಂದು ಹೇಳುವುದು. ನಿಜವಾಗಿಯೂ ವ್ಯಕ್ತಿ ಆಲೋಚನೆಗಳ ಮೊತ್ತ—ಅವನ ಆಲೋಚನೆಗಳಂತೆ ಅವನಿರುತ್ತಾನೆ. ಮಹಿಳೆಯರು ಗಾಯತ್ರೀ ಮಂತ್ರಕ್ಕೆ ಅನರ್ಹರು ಎನ್ನುವುದಕ್ಕೆ ಯಾವ ಶಾಸ್ತ್ರಾಧಾರವೂ ಇಲ್ಲ. ಅದು ರೂಢಿಮೂಲವಾದುದು. ವೇದಕಾಲದಲ್ಲಿ ಉಪನಯನ ವಿಧಿ ಗಂಡು ಹೆಣ್ಣುಮಕ್ಕಳಿಬ್ಬರಿಗೂ ಸಮಾನವಾಗಿತ್ತು. ಇಬ್ಬರೂ ವೇದಾಧ್ಯಯನಕ್ಕಾಗಿ ಗುರುಗೃಹಕ್ಕೆ ಹೋಗುತ್ತಿದ್ದರು. ಮುಂದೆ ವಿವಿಧ ಸಾಮಾಜಿಕ ಕಾರಣಗಳಿಂದಾಗಿ ಈ ಸಂಪ್ರದಾಯ ನಿಂತುಹೋಯಿತು. ಸಮಾಜ ಪುರುಷಪ್ರಧಾನವಾಯಿತು. ಈಗ ಮಹಿಳೆಯರು ತಮ್ಮ ಹಕ್ಕನ್ನು ಪುನಃ ಪಡೆಯುತ್ತಿದ್ದಾರೆ.

✹ **ದೇವರು, ಸಂನ್ಯಾಸಿ ಮತ್ತು ದೊರೆ ಇವರ ದೃಷ್ಟಿ ನೇರವಾಗಿ ವ್ಯಕ್ತಿಯ ಮೇಲೆ ಬೀಳಬಾರದಂತೆ ಏಕೆ?**

ಈ ನಂಬಿಕೆಯೂ ಕೂಡ ಒಂದು ಕಂದಾಚಾರ—ಯಾವ ಶಾಸ್ತ್ರಾಧಾರವೂ ಇಲ್ಲ. ತಮ್ಮ ದೃಷ್ಟಿ ಪ್ರಜೆಗಳ ಮೇಲೆ ಬೀಳದಂತೆ—ಮತದಾನ ಯಾಚಿಸುವ ಸಮಯದಲ್ಲಿ ಬಿಟ್ಟು—ರಾಜರೇ, ಮಂತ್ರಿಗಳೇ ಎಚ್ಚರ ವಹಿಸುತ್ತಾರೆ! ಒಮ್ಮೆ ಅಧಿಕಾರಕ್ಕೆ ಬಂದನಂತರ ಪ್ರಜೆಗಳ ದೃಷ್ಟಿಯಿಂದ ರಾಜರೇ ತಪ್ಪಿಸಿಕೊಳ್ಳುವುದರಿಂದ ಆತನ ದೃಷ್ಟಿ ಪ್ರಜೆಗಳ ಮೇಲೆ ಬೀಳುವ ಪ್ರಶ್ನೆಯೇ ಏಳುವುದಿಲ್ಲ. ಆದರೆ ದೇವರು ಪ್ರತಿಯೊಬ್ಬರ ಆಂತರ್ಯದಲ್ಲಿದ್ದು ನಮ್ಮ ಕೃತ್ಯಗಳನ್ನು ಗಮನಿಸುತ್ತಿರುತ್ತಾನೆ. ಹೀಗಾಗಿ ಅವನ ದೃಷ್ಟಿ ಬಾಹ್ಯಸ್ವರೂಪದ್ದಲ್ಲ ಆಂತರ್ಯವಾದದ್ದು. ಯಾರು ತಮ್ಮ ಅಂತರಂಗದಲ್ಲಿ ಶುದ್ಧರಾಗಿರುತ್ತಾರೋ ಅವರು ಆ ದೇವರ ಕೃಪಾದೃಷ್ಟಿಯನ್ನು ಅನುಭವಿಸಬಹುದು. ಸಂನ್ಯಾಸಿಯ ದೃಷ್ಟಿ ಯಾವಾಗಲೂ ಭಗವಂತನ ಕಡೆಗೇ ಇರಬೇಕು; ಅವನ ದೃಷ್ಟಿ ವ್ಯಕ್ತಿಯ ಬಾಹ್ಯ ಸ್ಥಾನಮಾನಗಳನ್ನು ಅವಲಂಬಿಸಿರಬಾರದು. ವ್ಯಕ್ತಿಗಳ ಸಂಪತ್ತು, ಸ್ಥಾನಮಾನದ ಮೇಲೆ ಸಂನ್ಯಾಸಿ ದೃಷ್ಟಿ ಹರಿಸುತ್ತಿದ್ದರೆ ಅವನು ಆದರ್ಶದಿಂದ ದೂರವಾಗಬಹುದು. ಅವನು ಅಂತರ್ಮುಖಿಯಾಗಿ ಪ್ರತಿಯೊಬ್ಬರ ಹೃದಯದಲ್ಲಿ ನೆಲೆಸಿರುವ ಭಗವಂತನ ಕಡೆಗೆ ದೃಷ್ಟಿಯನ್ನಿಟ್ಟಿರಬೇಕು.

(ಪ್ರಶ್ನೆಗಳು: ಗೀತಾ, ಹೊಸದುರ್ಗ, ಚಿತ್ರದುರ್ಗ)